**ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ**

ದಿನಾಂಕ : 23-07-2018

# ವರದಿ

ದೇಶದ ಭವಿಷ್ಯ ನಿರ್ಧರಿಸುವಲ್ಲಿ ಶಿಕ್ಷಣ ಕ್ಷೇತ್ರದ್ದು ಪ್ರಮುಖ ಪಾತ್ರ

ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಪೋಷಕರ ಸಭೆ ಉದ್ಘಾಟಿಸಿ – ಡಾ. ಎಂ ಪ್ರಭು

ಕೊಳ್ಳೇಗಾಲ : 23-07-2018 : ನಮ್ಮ ಸುಖ ಸಮೃದ್ಧಿಯ ನಾಳೆಗೆ ಇಂದು ಬುನಾದಿ ಹಾಕುವುದು ಶಿಕ್ಷಣ. ಅಂತೆಯೇ ನಮ್ಮ ದೇಶದ ಭವಿಷ್ಯ ನಿರ್ಧರಿಸುವಲ್ಲಿ, ಮಾನವ ಸಂಪತ್ತು ರೂಪಿಸುವಲ್ಲಿ ಶಿಕ್ಷಣ ಕ್ಷೇತ್ರ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಜೆಎಸ್‌ಎಸ್ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರಾದ ಡಾ. ಎಂ ಪ್ರಭು ಅಭಿಪ್ರಾಯಿಸಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಅಧ್ಯಾಪಕ – ಪೋಷಕರ ಸಮಿತಿ ವತಿಯಿಂದ ಆಯೋಜಿಸಿದ್ದ 2018-19ನೇ ಸಾಲಿನ ಪೋಷಕರ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು.

ಪ್ರಸ್ತುತ ದೇವರೇ ಇಲ್ಲದ ಗುಡಿಗಳಂತಾಗಿವೆ ನಮ್ಮ ಜ್ಞಾನ ಮಂದಿರಗಳು. ಕುಲಪತಿಗಳಿಲ್ಲದ ವಿಶ್ವವಿದ್ಯಾನಿಲಯಗಳು, ಬೋಧಕರಿಲ್ಲದ ಶಾಲಾ ಕಾಲೇಜುಗಳು, ವಿದ್ಯಾರ್ಥಿಗಳನ್ನು ಆತಂಕದಲ್ಲಿ ಸಿಲುಕಿಸುವುದು ದುರದೃಷ್ಟಕರ. ಖಾಸಗಿ ಶಿಕ್ಷಣ ಸಂಸ್ಥೆಗಳಿಂದ ಶಿಕ್ಷಣ ಸೇವೆಯು ಲಭ್ಯವಿಲ್ಲದಿದ್ದ ಪಕ್ಷದಲ್ಲಿ ದೇಶದ ಪರಿಸ್ಥಿತಿಯು ಅಧೋಗತಿಯಾಗುವುದು ಕಟುಸತ್ಯ. ಸರಕಾರಗಳಿಗೆ ಶಿಕ್ಷಣ ಕ್ಷೇತ್ರವು ಬೇಡವಾದ ಕೂಸಾಗಿರುವುದು ವಿಪರ್ಯಾಸವೇ ಸರಿ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಪ್ರೊ. ಉಮೇಶ್ ಪೋಷಕರ ಅಹವಾಲುಗಳಿಗೆ ಉತ್ತರಿಸುತ್ತ ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಲ್ಲಿ ಕಲಿಯುವುದು ಕೈಅಗಲ ಮಾತ್ರ ಕಲಿಯಬೇಕಾದದ್ದು ಜಗದಗಲವಿದೆ. ಅಧ್ಯಯನದಿಂದ ಪಡೆದ ಜ್ಞಾನಕ್ಕಿಂತ ಅನುಭವದಿಂದ ಪಡೆವ ಜ್ಞಾನ ಶ್ರೇಷ್ಠ. ಪುಸ್ತಕ ಜ್ಞಾನಕ್ಕಿಂತ ಮಸ್ತಕ ಜ್ಞಾನ ಮುಖ್ಯವಾಗುತ್ತದೆ. ಸುಶಿಕ್ಷಿತರಾಗುವುದಕ್ಕಿಂತ ಸುಸಂಸ್ಕೃತರಾಗುವುದು ಬೇಕಿದೆ. ಸಂಸ್ಕಾರವಿಲ್ಲದ ಶಿಕ್ಷಣ ಅಪೂರ್ಣ ಮತ್ತು ಅಪಾಯಕಾರಿ. ಪದವಿ ನೀಡುವುದಕ್ಕಿಂತ ಸುಸಂಸ್ಕೃತ ಪದವೀಧರರನ್ನಾಗಿ ಮಾಡುವುದು ಶಿಕ್ಷಣ ಸಂಸ್ಥೆಗಳ ಕರ್ತವ್ಯವಾಗಬೇಕು. ಆದ್ದರಿಂದ ಪೋಷಕರ ಮೇಲೆಯೂ ಅಧ್ಯಾಪಕರಷ್ಟೆ ಗುರುತರ ಜವಾಬ್ದಾರಿಯಿರುತ್ತದೆ. ತಾವು ಆಗಾಗ ಸಂಸ್ಥೆಗಳಿಗೆ ಭೇಟಿ ಕೊಟ್ಟು ಮಕ್ಕಳ ಹಾಜರಾತಿ, ಕಲಿಕೆ, ಕಾಲೇಜಿನ ಗುಣಮಟ್ಟ, ಕಾಲೇಜಿನ ಮೂಲ ಸೌಲಭ್ಯಗಳು ಹಾಗೂ ಇನ್ನಿತರ ವ್ಯವಸ್ಥೆಗಳ ಬಗೆಗೆ ನಿರಂತರವಾಗಿ ಗಮನಿಸಬೇಕೆಂದು ಕರೆ ನೀಡಿದರು.

ಅಧ್ಯಾಪಕ – ಪೋಷಕರ ಸಮಿತಿ ಸಂಚಾಲಕ ಶ್ರೀ ಬಿ. ಮಂಜುನಾಥ್, ಇತಿಹಾಸ ವಿಭಾಗದ ಮುಖ್ಯಸ್ಥರಾದ ಶ್ರೀ ಹೆಚ್. ಜಿ ನಟರಾಜನ್, ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಎ ಎಸ್ ಸ್ಮಿತಾ, ವ್ಯವಹಾರ ನಿರ್ವಹಣಾ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಎಸ್ ಮಮತ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕು.ಆರ್.ಪಿ.ಸೌಮ್ಯ ಸ್ವಾಗತಿಸಿ, ಶ್ರೀಸುರೇಶ್‌ರವರು ವಂದಿಸಿದರು ಹಾಗೂ ಶ್ರೀಮತಿ ವಿ.ಗೀತಾರವರು ನಿರೂಪಿಸಿದರು.

ಅಧ್ಯಾಪಕ – ಪೋಷಕರ ಸಮಿತಿ ವತಿಯಿಂದ ಆಯೋಜಿಸಿದ್ದ 2018–19ನೇ ಸಾಲಿನ ಪೋಷಕರ ಸಭೆ. ಚಿತ್ರದಲ್ಲಿ ಶ್ರೀ ಬಿ. ಮಂಜುನಾಥ, ಶ್ರೀ ಶ್ರೀನಿವಾಸ್, ಡಾ. ಎಂ. ಪ್ರಭು, ಪ್ರಾಚಾರ್ಯ ಪ್ರೊ. ಉಮೇಶ, ಶ್ರೀ ಹೆಚ್.ಜಿ. ನಟರಾಜನ್, ಶೀಮತಿ ಎಸ್ ಮಮತ ಹಾಗೂ ಶ್ರೀಮತಿ ಎ ಎಸ್ ಸ್ಮಿತಾರವರನ್ನು ಕಾಣಬಹುದು




ಅಧ್ಯಾಪಕ – ಪೋಷಕರ ಸಮಿತಿ ವತಿಯಿಂದ ಆಯೋಜಿಸಿದ್ದ 2018–19ನೇ ಸಾಲಿನ ಪೋಷಕರ ಸಭೆಯಲ್ಲಿ ಡಾ. ಎಂ ಪ್ರಭುರವರು ಉದ್ಘಾಟನಾ ಭಾಷಣ ಮಾಡುತ್ತಿರುವುದು ಚಿತ್ರದಲ್ಲಿ ಶ್ರೀ ಬಿ. ಮಂಜುನಾಥ, ಶ್ರೀ ಶ್ರೀನಿವಾಸ್, ಪ್ರಾಚಾರ್ಯ ಪ್ರೊ. ಉಮೇಶ, ಶ್ರೀ ಹೆಚ್.ಜಿ. ನಟರಾಜನ್, ಶೀಮತಿ ಎಸ್ ಮಮತ ಹಾಗೂ ಶ್ರೀಮತಿ ಎ ಎಸ್ ಸ್ಮಿತಾರವರನ್ನು ಕಾಣಬಹುದು.




ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಪೋಷಕರು.



ಪ್ರಾಚಾರ್ಯ ಪ್ರೊ. ಉಮೇಶ ಪೋಷಕರ ಅಹವಾಲಿಗೆ ಉತ್ತರಿಸುತ್ತಿರುವುದು.

